ಕುಡಿಯುವ ನೀರಿನ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿ

1009. ಶ್ರೀ ಬಿ. ಹಂಪನ ಗೌಡ (ಸಿಂಧನೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿಯು ದೊರೆತಿರುವ ಜಿಲ್ಲೆಗಳೆಷ್ಟು?
(ತಾಲ್ಲುಕುವಾರು ಹೆಸರು 'ತಿಳಿಸುವುದು)

ಆ) ಹಾಗಿದ್ದಲ್ಲಿ ರಾಯಚೂರು ಜಿಲ್ಲೆಯ ಎಷ್ಟು ತಾಲ್ಲೂಕುಗಳಿಗೆ ಮಂಜೂರಾತಿ ದೊರಕಿದೆ?
(ಯಾವುವು ತಿಳಿಸುವುದು)

ಇ) ಈ ಯೋಜನೆಯ ಕಾಮಗಾರಿಗಳು ಯಾವ ಹಂತದಲ್ಲಿವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) –

ಅ) ಗುಲ್ಬರ್ಗ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳು ಸೇರಿಕೊಂಡಿವೆ.

ಆ) ಎಲ್ಲಾ ತಾಲ್ಲೂಕುಗಳು ಸೇರಿವೆ.

ಇ) ಭಾರತ ಸರ್ಕಾರದಿಂದ ಅನುಮೋದಿಸಿರುವ 215 ಹಳ್ಳಿಗಳ ಪೈಕಿ 125 ಹಳ್ಳಿಗಳನ್ನು ಮಿನಿ ಮಿಷನ್ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಇದರ ಅಂದಾಜು ವೆಚ್ಚ ರೂ. 400.00 ಲಕ್ಷಗಳಾಗಿರುತ್ತದೆ. ಜನವರಿ 92ರ ಅಂತ್ಯದವರೆಗೆ ಒಟ್ಟು 89 ಹಳ್ಳಿಗಳಿಗೆ ನೀರು ಪೂರೈಕೆ ಆಗಿದೆ. ಮಿಕ್ಕ ಕಾಮಗಾರಿಗಳು ವಿವಿಧ ಹಂತದಲ್ಲಿವೆ.

ತುಂಗಭದ್ರಾ ಜಲಾಶಯದಿಂದ ಎಡದಂಡೆ ನಾಲೆಗೆ ಬಿಡುವ ನೀರಿನ ಪ್ರಮಾಣ

1010. ಶ್ರೀ ಬಿ. ಹಂಪನಗೌಡ (ಸಿಂಧನೂರು) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ತುಂಗಭದ್ರಾ ಜಲಾಶಯದಿಂದ ಪ್ರತಿ ನಿಮಿಷಕ್ಕೆ ಎಡದಂಡೆ ನಾಲೆಗೆ ನೀಡುವ ಪ್ರಮಾಣವೆಷ್ಟು?
2) ತುಂಗಭದ್ರಾ ಜಲಾಶಯದಲ್ಲಿರತಕ್ಕ ನೀರಿನ ಸಂಗ್ರಹಣೆ ಎಷ್ಟು?
3) ಈ ನೀರಿನಲ್ಲಿ ಎಡದಂಡೆ ನಾಲೆಗೆ ದೊರಕುವ ಪ್ರಮಾಣವೆಷ್ಟು?
4) ಎಡದಂಡೆ ನಾಲೆಯಲ್ಲಿ ನೀರಿನ ಪೂರ್ಣ ಪ್ರಮಾಣವನ್ನು ಬಳಸಲಾಗಿದೆಯೇ?
5) ಈ ವರ್ಷದಲ್ಲಿ ಎಡದಂಡೆ ನಾಲೆಯನ್ನು ಸಂಪೂರ್ಣ ದುರಸ್ತಿ ಮಾಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) –

1) ಸಾಮಾನ್ಯವಾಗಿ 3500 ಕ್ಯೂಸೆಕ್ಸ್ ನೀರನ್ನು ಬಿಡಲಾಗುತ್ತಿದೆ. ಈ ನೀರಿನ ಪ್ರಮಾಣವು ಬೆಳೆಗಳ ಬೇಡಿಕೆಗೆ ಅನುಸಾರವಾಗಿರುತ್ತದೆ.
2) ಜಲಾಶಯದಲ್ಲಿ ಉಪಯುಕ್ತವಾದ ನೀರಿನ ಪ್ರಮಾಣವು 116.84 ಟಿ.ಎಂ.ಸಿ.
3) ತುಂಗಭದ್ರಾ ಎಡದಂಡೆ ಕಾಲುವೆ ಹಾಗೂ ತುಂಗಭದ್ರಾ ಎಡದಂಡೆ ಮೇಲ್ಪಟ್ಟದ ಕಾಲುವೆಗಳಿಗೆ 1991–92ನೇ ಸಾಲಿನಲ್ಲಿ ಸೇರಿದಂತೆ ಒಟ್ಟು ನೀರಿನ ಪಾಲು 76.746 ಟಿ.ಎಂ.ಸಿ.ಯಷ್ಟು ಎಂದು ನಿಗದಿಪಡಿಸಲಾಗಿದೆ.
4) ತುಂಗಭದ್ರಾ ಎಡದಂಡೆ ಹಾಗೂ ಎಡದಂಡೆ ಮೇಲ್ಪಟ್ಟದ ಕಾಲುವೆಯಲ್ಲಿ ಫೆಬ್ರವರಿ ತಿಂಗಳು ಅಂತ್ಯದವರೆಗೆ 63.293 ಟಿ.ಎಂ.ಸಿ. ಯಷ್ಟು ನೀರನ್ನು ಬಳಸಲಾಗಿದೆ.
5) ಲಭ್ಯವಾಗುವ ಕಾಲಾವಕಾಶ ಹಾಗೂ ಅನುದಾನವನ್ನನುಸರಿಸಿ ಸಾಧ್ಯವಾದಷ್ಟು ಮಾಡಲಾಗುವುದು.